ಪಾಲುಗೊಳ್ಳುತ್ತ ಒಪ್ಪಗೊಂಡವು. ಬೆಳಗಿನ ತಿರುಗಾಟಕ್ಕೆ ಜೊತೆಯಾದ ಬೇರೆಯ ಪೀಳಿಗೆ ಮನುಷ್ಯನ್ನು ಕಂಡು ಹಿರಿಯರು ಮೊದಮೊದಲು ಸಂಶಯದಿಂದಲೇ ನೋಡಿ ನಂತರ ಸ್ವಾಗತಿಸಿದರು. ಓಣಿಯ ಮಕ್ಕಳು ಅವನನ್ನು ತಮ್ಮ ಆಟದಲ್ಲಿ ಸೇರಿಸಿಕೊಳ್ಳದಿದ್ದರೂ ಹೊಸ ಪ್ರಾಯೋಜಕರು ಸಿಕ್ಕವರಂತೆ ಸಂಭ್ರಮಿಸಿದವು; ಲೋಕಿ ಕೊಟ್ಟ ಸಲಹೆಯನ್ನು ಪಾಲಿಸುತ್ತಿದ್ದೇನೆಂದು ಪೊಲೀಸು ಠಾಣೆಯಲ್ಲಿ ಹಾಜರಾತಿ ಹಾಕಿದಂತೆ ದಿನಕ್ಕೊಮ್ಮೆ ಹೋಟೆಲ್ಲಿಗೂ ಹೋಗಿ ಮಾತಾಡಿಸಿ ಬರುತ್ತಿದ್ದ. ಕನ್ನಡಿಯಲ್ಲಿ ಅವನ ಸ್ವರೂಪ ಆಗೀಗ ಕಾಣತೊಡಗಿತು, ಸುಮ್ಮನೆ ಕುಳಿತುಕೊಂಡರೆ ಅವನ ಒಳಗಿನ ಹಾಡು ಕೇಳತೊಡಗಿತು. ತನ್ನ ಸಮಸ್ಯೆಗಳು ಇನ್ನೇನು ಮುಗಿದೇ ಹೋದವು, ಹಾಕಿದ ರಜಾ ಮುಗಿಯುವುದೇ ತಡ, ತಾನು ಆಫೀಸಿಗೂ ಹೋಗಬಹುದು ಎನ್ನುವ ಆಸೆ ಚಿಗುರತೊಡಗಿತು. ಅದೇ ಸಮಯದಲ್ಲಿ ಆಗಬಾರದು ಎಂದು ಹಾರೈಸಿದ್ದ, ಆಗಲಾರದು ಎಂದು ಧೈರ್ಯ ತುಂಬಿಕೊಂಡಿದ್ದ ಬೆಳವಣಿಗೆ ನಡೆದೇಹೋಯಿತು.

ಆಫೀಸಿಗೆ ಹೋಗಲು ಇನ್ನೊಂದು ದಿನ ಇದೆ ಎನ್ನುವಾಗ HR ಆಫೀಸಿನಿಂದ ವೈಯಕ್ತಿಕವಾಗಿ ಬಂದು ಕಾಣುವಂತೆ ಇಮೇಲ್ ಬಂತು. ಆ ಕುರಿತು ಮೊದಲೇ ಹೆದರಿದ್ದ ಆತ್ಮಾರಾಮ ತನ್ನ ಸಮಸ್ಯೆಗಳನ್ನು ಬದಿಗಿಟ್ಟು ಆಫೀಸಿಗೆ ಧಾವಿಸಿದ.

* * *

“ಯಾಕೆ ಕರೆಸಿರಬಹುದು ಎಂದು ತಿಳಿದಿರಬೇಕಲ್ವಾ?” HR ಮುಖದಲ್ಲಿ ಆತ್ಮಾರಾಮನೆಂದೂ ಕಂಡಿರದ ನಿರ್ಲಿಪ್ತತೆ, ಅವಳ ಮುಂದೆ ಇದ್ದ ಎರಡು ಬಣ್ಣದ ಕಡತಗಳು, ಸಾಕ್ಷಿಯಂತೆ ಕುಳಿತಿದ್ದ ಅವಳ ಸಹಾಯಕಿ; ಊಹಿಸಲು ಕಷ್ಟಪಡಬೇಕಿರಲಿಲ್ಲ. ಆದರೂ ‘ನೀವೇ ಹೇಳಿ’ ಎನ್ನುವ ರೀತಿ ಸನ್ನೆ ಮಾಡಿ ಸುಮ್ಮನಾದ.

ಕೆಲಸಕ್ಕೆ ಸಂಬಂಧಿಸಿರದ ವಿಷಯಗಳನ್ನು ಆಲಿಸುವುದು, ಖಾಸಗಿ ಸಂಗತಿಗಳನ್ನು ಹೇಳುವಂತೆ ವಯೋವೃದ್ಧ ಕಸ್ಟಮರುಗಳನ್ನು ಒಲಿಸುವುದೂ ಸೇರಿದಂತೆ ಅವನ ಮೇಲಿರುವ ಹಲವು ಆರೋಪಗಳ ಕುರಿತ ಅವನ ಅಭಿಪ್ರಾಯ ಕೇಳಲು ಕರೆಸಲಾಗಿತ್ತು. ಅವುಗಳು ದಾಖಲಾದ ಸಮಯ, ದಿನ, ಕಸ್ಟಮರುಗಳ ಹೆಸರು... ಇತ್ಯಾದಿ ವಿವರಗಳು ಕೆಂಪು ಬಣ್ಣದ ಕಡತದಲ್ಲಿ ದಾಖಲಾಗಿದ್ದವು. ಅವು ಅವನ ಗಮನಕ್ಕೆ ಬಂದ ಕೊನೆಯ ದಿನದ ಒಂದು ಮಾತುಕತೆಗಷ್ಟೇ ಸೀಮಿತವಾಗಿರಲಿಲ್ಲ. ಹೆಚ್ಚಿನ ಘಟನೆಗಳು ನೆನಪಿಗೆ ಬಾರದಿದ್ದರೂ ದಾಖಲೆಗಳಿದ್ದರೆ ನಿಜವಿರಬಹುದು ಎಂದು ಒಪ್ಪಿಕೊಂಡ.

“ಕೆಲವೊಮ್ಮೆ ಸಹಾನುಭೂತಿ ತೋರಿಸಲಿಕ್ಕಾಗಿ ಕೇಳಬೇಕಾಗ್ತದೆ. ಕೇಳದೇ ಹೋದರೆ ಒರಟು ಅನ್ನಿಸಬಹುದು ಅಂತ...”

ಸಹಾಯಕಿ ಕೆಲವು ಪುಟಗಳನ್ನು ಮುಂದಿಟ್ಟಳು. ಇಡೀ ಮಾತುಕತೆ ಮುದ್ರಿತವಾಗಿತ್ತು. ಅಲ್ಲಲ್ಲಿ ಕೆಂಪು ಅಡಿಗೆರೆಗಳಿದ್ದವು.

“ಸಹಾನುಭೂತಿ ತೋರಿಸಲಿಕ್ಕೆ ಇಷ್ಟೆಲ್ಲ ಮಾತು? ಈ ಮೊದಲು ನಿಮ್ಮ ಮ್ಯಾನೇಜರ್ ಈ ಕುರಿತು ಎಚ್ಚರಿಸಿದ್ರಾ?” HR ಪ್ರಶ್ನೆಗೆ ಅವನಲ್ಲಿ ಉತ್ತರವಿರಲಿಲ್ಲ. ಅವಳ ಸಹಾಯಕಿ ಇನ್ನೂ ಎರಡು ಪುಟಗಳನ್ನು ಹೊರತೆಗೆದು, ಅದರಲ್ಲಿ ಬರೆದುಕೊಳ್ಳತೊಡಗಿದಳು.

“ನಿರ್ಣಯವನ್ನು ಸಂಬಂಧಪಟ್ಟವರು ತೆಗೆದುಕೊಳ್ಳುತ್ತಾರೆ, ನಿಮ್ಮ ಉತ್ತರವನ್ನು ದಾಖಲು ಮಾಡುವುದಷ್ಟೆ ನಮ್ಮ ಕೆಲಸ.”

ತನ್ನ ಕೆಲಸದಂತೆ ಅವರಿಗೂ ಆ ಮೊದಲೇ ನಿಗದಿಪಡಿಸಿದ ನುಡಿಗಟ್ಟುಗಳಲ್ಲಿ ಉತ್ತರಿಸಬೇಕಾದ ಅಸಹಾಯಕತೆ ಇದೆಯೆಂಬ ಕಲ್ಪನೆ ಬಂದು ಕನಿಕರ ಹುಟ್ಟಿತು. ನಿರ್ಣಯವನ್ನು ನಂತರ ತಿಳಿಸಲಾಗುವುದು ಎಂದು ಹೇಳಿದರೂ, ಅವಳ ಕಣ್ಣುಗಳು ಅದು ಆ ಆಫೀಸಿನಲ್ಲಿ ಅವನ ಕೊನೆಯ ದಿನವೆನ್ನುವುದನ್ನು ಜಾಹೀರುಗೊಳಿಸಿದವು.

* * *

ಮನೆಗೆ ಬಂದವನು ಕನ್ನಡಿಯನ್ನು ತಿರುಗಿಸಿಟ್ಟು, ಬಾಗಿಲು ಮುಚ್ಚಿ ಸೋಫಾದ ಮೇಲೆ ಕೂತ. ಹೊರಗೆ ಮಕ್ಕಳಾಟದ ಸದ್ದು, ನಾಯಿಗಳ ಬೊಗಳುವಿಕೆ, ತರಕಾರಿ ಮಾರಾಟದವರ ಏರುದನಿಯ ಕೂಗುಗಳು ಒಮ್ಮೆಲೇ ನಿಂತುಹೋದವು. ಕಿಟಕಿ ಪರದೆಯನ್ನು ಮುಚ್ಚಿದಾಗ ಬರುತ್ತಿದ್ದ ಬೆಳಕು ಬತ್ತಿಹೋಗಿ ಕತ್ತಲೆ ರೂಮನ್ನು ಆವರಿಸಿಕೊಂಡಿತು. ಸಾಧಿಸಬೇಕಾದ ಗುರಿಗಳಿಲ್ಲ, ಹೋಗಬೇಕಾದ ಮೀಟಿಂಗುಗಳಿಲ್ಲ ಎನ್ನುವಂತಹ ಶೂನ್ಯತೆ ಆವರಿಸಿಕೊಂಡು, ಗಂಟೆಗಟ್ಟಲೆ ಕುಳಿತೇ ಇದ್ದ. ತಲೆತುಂಬಾ ಲೋಕಿಯ ಮಾತುಗಳು